ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD, MALLESHWARAM, BENGALURU – 560 003**

ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ,
ಫೆಬ್ರವರಿ / ಮಾರ್ಚ್ — 2023

**STATE LEVEL SSLC PREPARATORY EXAMINATION, FEBRUARY / MARCH — 2023**

ಸಂಕೇತ ಸಂಖ್ಯೆ : **01-K** | **Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

ದಿನಾಂಕ : 27. 02. 2023 ] | [ Date : 27. 02. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] | [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] | [ Max. Marks : 100

---

## *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **6 × 1 = 6**

1. 'ಒಮ್ಮೊಮ್ಮೆ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಲೋಪ ಸಂಧಿ

   (ಬಿ) ಸವರ್ಣದೀರ್ಘ ಸಂಧಿ

   (ಸಿ) ಆದೇಶ ಸಂಧಿ

   (ಡಿ) ಆಗಮ ಸಂಧಿ

2. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ

   (ಎ) ಭಾವಸೂಚಕ ಚಿಹ್ನೆ

   (ಬಿ) ವಿವರಣಾತ್ಮಕ ಚಿಹ್ನೆ

   (ಸಿ) ವಾಕ್ಯವೇಷ್ಟನ ಚಿಹ್ನೆ

   (ಡಿ) ಉದ್ಧರಣ ಚಿಹ್ನೆ

3. ತತ್ಪುರುಷ ಸಮಾಸಕ್ಕೆ ಉದಾಹರಣೆಯಿದು

   (ಎ) ಅಂಗೈ

   (ಬಿ) ಈ ಬೆಕ್ಕು

   (ಸಿ) ತಲೆನೋವು

   (ಡಿ) ಮುಕ್ಕಣ್ಣು

4. ಪಂಚಮೀ ವಿಭಕ್ತಿಯ ಪ್ರತ್ಯಯವಿದು

(ಎ) ಒಳ್

(ಬಿ) ಅಂ

(ಸಿ) ಇಂದಂ

(ಡಿ) ಅತ್ತಣಿಂ

5. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ

(ಎ) ೯

(ಬಿ) ೩

(ಸಿ) ೫

(ಡಿ) ೧೦

6. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯ್ತು; ಈ ಕಾರಣದಿಂದ ಅವರನ್ನು ವರ್ಗಾಯಿಸಲಾಯ್ತು. ಇದು

(ಎ) ಸಂಯೋಜಿತ ವಾಕ್ಯ

(ಬಿ) ಮಿಶ್ರವಾಕ್ಯ

(ಸಿ) ಸಾಮಾನ್ಯ ವಾಕ್ಯ

(ಡಿ) ಪ್ರಶ್ನಾರ್ಥಕ ವಾಕ್ಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

7. ನಮೋನಮೋ : ದ್ವಿರುಕ್ತಿ :: ಧೀರಶೂರ : ........................ .

8. ಸಿರಿವಂತ : ತದ್ಧಿತಾಂತನಾಮ :: ಜಾಣತನ : ........................ .

9. ನದಿ : ರೂಢನಾಮ :: ವಿಜ್ಞಾನಿ : ........................ .

10. ಬೇಗನೆ : ಸಾಮಾನ್ಯಾರ್ಥಕಾವ್ಯಯ :: ಚಟಚಟ : .................. .



[ Turn over

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 7 × 1 = 7

11. ಶಬರಿ ಯಾರ ಆಶ್ರಮದಲ್ಲಿ ವಾಸವಿದ್ದಳು ?

12. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು ?

13. ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗ ಯಾವುದು ?

14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?

15. ದಿನಪಸುತ ಎಂದರೆ ಯಾರು ?

16. ಮುನಿಸುತರು ಹೆದರಲು ಕಾರಣವೇನು ?

17. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

19. ವಚನಕಾರರ ದೃಷ್ಟಿಯಲ್ಲಿ 'ಅರಿವು' ಎಂದರೇನು ಎಂಬುದನ್ನು ವಿವರಿಸಿ.

20. 'ಪುರುಷ' ಎಂಬ ಶಬ್ದಕ್ಕಿರುವ ಅರ್ಥವೇನು ?

21. ಧರ್ಮಾಧಿಕರಣರು ವಟವೃಕ್ಷದ ಬಳಿ ಏನೆಂದು ಪ್ರಾರ್ಥಿಸಿದರು ?

22. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕು ಎಂದು ಕವಿ ಹೇಳಿದ್ದಾರೆ ?

23. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

24. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ? ತಿಳಿಸಿ.

25. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

26. ಜನರಲ್ ಡಯರನು ನಡೆಸಿದ ಪೈಶಾಚಿಕ ಕೃತ್ಯವನ್ನು ಲೇಖಕರು ಹೇಗೆ ತಿಳಿಸಿದ್ದಾರೆ ?

27. ಪ್ರಾಸ ಬಿಟ್ಟು ಬರೆಯಬೇಕೆಂದಿದ್ದ ಪೈಗಳು ಪ್ರಾಸ ಇಟ್ಟೇ ಬರೆಯಲು ಕಾರಣವೇನು ?

**V.** **ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **2 × 3 = 6**

28. ಡಿ.ಎಸ್. ಜಯಪ್ಪಗೌಡ

29. ಕುವೆಂಪು

**VI.** **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** **1 × 3 = 3**

30. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ।
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ।
ಪೊತ್ತುಮಾರ್ಕೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥

**VII.** **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** **1 × 3 = 3**

31. ರಾಮಲಕ್ಷ್ಮಣರು ಅಶ್ವಿನಿ ದೇವತೆಗಳಂತೆ ಶೋಭಿಸುತ್ತಿದ್ದರು.

**VIII.** **ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ :** **1 × 3 = 3**

32. ಕೂಡಿ ಬಾಳಿದರೆ ಸ್ವರ್ಗಸುಖ.

**ಅಥವಾ**

ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**IX.** **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** **6 × 3 = 18**

33. "ಎಂಥ ಪ್ರಖ್ಯಾತ ನಾಟಕಕಾರರನ್ನು ಕಾಲ್ಕೆಳಕ್ಕೆ ಹಾಕಿ ತುಳಿಯುತ್ತಿದ್ದೇನಲ್ಲ ?"

34. "ಸಂಪತ್ತಿಗೆ ಸ್ನೇಹದ ಬಂಧನವಿಲ್ಲ; ಕುಲದ ಗುರುತಿಲ್ಲ."

35. "ಚಿನ್ನವಿಲ್ಲದೆ ಬದುಕಬಹುದು, ಅನ್ನವಿಲ್ಲದೆ ಬದುಕಲಾದೀತೆ ?"

36. "ಮನ್ವಂತರಗಳ ಭಾಗ್ಯವ ತೆರೆಸಿ"

37. "ಮಾರಿಗೌತಣವಾಯ್ತು ನಾಳಿನ ಭಾರತವು"

38. "ನೆಲಕಿಚೆವೆನೆಂದು ಬಗೆದಿರೆ ಚಲಕಿಚೆವೆಂ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

39. ಕಲುಷಿತವಾದೀ ..............................................

..............................................

..............................................

.............................................. ಮುಟ್ಟೋಣ

**ಅಥವಾ**

ಮತಗಳೆಲ್ಲವೂ ..............................................

..............................................

..............................................

.............................................. ಬಿತ್ತೋಣ.

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 × 4 = 4**

40. ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇಟವರೊಳಾವುದನೀವುದೊ ಕುಂಭಸಂಭವ ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **2 × 4 = 8**

41. ಆದರ್ಶ ವ್ಯಕ್ತಿ ದೋಷರಹಿತನಾಗಿರಬೇಕಾದ್ದು ಮುಖ್ಯ. ಏಕೆ ?

**ಅಥವಾ**

ತಿಲಕರು ಮತ್ತು ಶಿವಾಜಿಯವರನ್ನು ಜನ ಹೇಗೆ ಸ್ವೀಕರಿಸಿದ್ದಾರೆಂಬ ಬಗ್ಗೆ ಲೇಖಕ ಹೆಡಗೇವಾರರ ಅಭಿಪ್ರಾಯವನ್ನು ತಿಳಿಸಿ.

42. ಹಲಗಲಿ ದಂಗೆಗೆ ಕಾರಣವೇನು ? ಬ್ರಿಟಿಷರು ಅದನ್ನು ನಿಯಂತ್ರಿಸಿದ ಬಗೆಯನ್ನು ವಿವರಿಸಿ.

**ಅಥವಾ**

ಹಲಗಲಿ ದಂಗೆಯ ಪರಿಣಾಮವೇನು ? ತಿಳಿಸಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

**1 × 4 = 4 ( 2 + 2 )**

43. ನಗೆಯನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು. ಮೆಚ್ಚುನಗೆ ಮತ್ತು ಚುಚ್ಚುನಗೆ. ಬುದ್ಧದೇವ ನಕ್ಕದ್ದು ಮುಗುಳುನಗೆ ; ಶ್ರೀಕೃಷ್ಣನದು ಸರಸನಗೆ ; ಪಂಪಕವಿ ಬೀರಿದುದು ರಸನಗೆ. ಈ ಬಗೆಯ ನಗೆಗಳಲ್ಲಿ ಮಾಧುರ್ಯವಿರುತ್ತದೆ. ಅದನ್ನು ಜನತೆ ಮೆಚ್ಚುತ್ತದೆ. ಮೆಚ್ಚುವ ನಗೆಯೇ ಮೆಚ್ಚುನಗೆ. ಅನ್ಯರ ಮನಕ್ಕೆ ನೋವಾಗುವಂತೆ ನಗುವುದು ಚುಚ್ಚುನಗೆ. ನಯಸೇನನ ಮೂದಲಿಕೆ ; ಬ್ರಹ್ಮ ಶಿವನ ಕಟಕಿ ; ತೆನಾಲಿ ರಾಮನ ಕುಚೇಷ್ಟೆ. ಈ ನಗೆಗಳಲ್ಲಿ ಒರಟುತನ ಹೆಚ್ಚು. ಮುಗ್ಧನಗೆ ನಮ್ಮನ್ನು ಕಾಯುತ್ತದೆ. ಅದರಿಂದ ಕಷ್ಟ ತುಂಬಿದ ನಮ್ಮ ಬಾಳು ಹಗುರಾಗುತ್ತದೆ. ಆದರೆ ಒರಟು ನಗೆ ಮಸೆದ ಚೂರಿ ಇದ್ದಂತೆ ; ಅದು ಕೊಲ್ಲುವ ನಗೆ.

ನಗುವಾಗ ಗುಣಾವಗುಣಗಳ ವಿಚಾರ ಮಾಡುವುದಿಲ್ಲ. ನಕ್ಕು ಮುಗಿಸಿದ ಮೇಲೆ ಒಮ್ಮೊಮ್ಮೆ ಆ ವಿಚಾರಕ್ಕೆ ಕೈಹಾಕುತ್ತೇವೆ. ನಮ್ಮ ನಗೆಯಿಂದ ಅನ್ಯರಿಗೆ ನೋವಾದರೆ ನಾವೆಲ್ಲ ಮರುಗುತ್ತೇವೆ. ನಾವು ಇಂತಹುದನ್ನು ಕಂಡು ನಗುತ್ತೇವೆಂದು ಹೇಳಲಿಕ್ಕಾಗದು. ಸಣ್ಣ ಮಕ್ಕಳಿಗೆ ನಿಗ್ರೋ ಮನುಷ್ಯರನ್ನು ನೋಡಿದರೆ ನಗೆ ; ಕುಡುಕರನ್ನು ಕಂಡರಂತೂ ಗಹಗಹಿಸುವ ನಗೆ. ಪರಕೀಯರ ವೇಷಭೂಷಣ ನಮಗೆ ನಗೆ ತರುತ್ತದೆ. ವ್ಯಂಗ್ಯ ಚಿತ್ರದಲ್ಲಿ ಎದ್ದು ಕಾಣುವ ಡೊಣ್ಣೆ ಮೂಗು ನಗೆಗೆ ಕಾರಣ. ಜಾಣನಂತೆ ವರ್ತಿಸುವ ಎಬಡನನ್ನು ಕಂಡರೆ ನಗೆ. ಅಸಂಬದ್ಧವಾದದ್ದು, ಅಸಂಗತವಾದದ್ದು, ವಿದ್ರೂಪವಾದದ್ದು ನಗೆಗೆ ಸಾಮಗ್ರಿ.

*ಪ್ರಶ್ನೆಗಳು :*

ಅ) ನಗು ಉಂಟಾಗಲು ಕಾರಣವಾಗುವ ಅಂಶಗಳನ್ನು ತಿಳಿಸಿ.

ಬ) ಮೆಚ್ಚುನಗೆಯ ಲಕ್ಷಣಗಳನ್ನು ತಿಳಿಸಿ.

**XIV.** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **1 × 5 = 5**

44. ನಿಮ್ಮನ್ನು ಮಧುಗಿರಿಯ ಸರ್ಕಾರಿ ಪ್ರೌಢಶಾಲೆಯ 'ಸುರೇಶ್' ಎಂದು ಭಾವಿಸಿಕೊಂಡು, ಶಾಲೆಗೆ 'ಶುದ್ಧ ಕುಡಿಯುವ ನೀರಿನ ಘಟಕ'ದ ಸೌಲಭ್ಯವನ್ನು ಒದಗಿಸುವಂತೆ ಕೋರಿ ನಗರಸಭೆ ಆಯುಕ್ತರಿಗೊಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ 'ನಿರ್ಮಲ' ಎಂದು ಭಾವಿಸಿಕೊಂಡು, 'ಶಾಲಾ ವಾರ್ಷಿಕೋತ್ಸವ'ಕ್ಕೆ ಆಹ್ವಾನಿಸಿ ಮಂಡ್ಯದ ಕೆ.ಜಿ. ಕೊಪ್ಪಲಿನಲ್ಲಿ ವಾಸವಾಗಿರುವ 'ಸುರಭಿ' ಎಂಬ ಹೆಸರಿನ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

**XV.** ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : **1 × 5 = 5**

45. ರಾಷ್ಟ್ರೀಯ ಹಬ್ಬಗಳ ಮಹತ್ವ

**ಅಥವಾ**

ರಾಷ್ಟ್ರೀಯ ಪೋಷಣ ಅಭಿಯಾನ